# ಸೈಬರ್ ಕೋಟೆ ದಿಡ್ಡಿಬಾಗಿಲು

## ಇದು ಬೀಗ ಬಲಪಡಿಸುವ ಸಮಯ



**ಡಿಜಿಟಲ್ ಭಾಷೆಗೆ ವಿಶ್ವಕ್ಕೆ ವಿಶ್ವವೇ ತನ್ನನ್ನು ಒಪ್ಪಿಸಿಕೊಂಡಿರುವಾಗ ಸೈಬರ್ ಜಗತ್ತನ್ನು ಹೆಚ್ಚು ಸುರಕ್ಷಿತವಾಗಿ ಇರಿಸಿಕೊಳ್ಳುವುದು ಅನಿವಾರ್ಯ. ಅಂತರ್ಜಾಲವನ್ನು ಹೆಚ್ಚು ಸುರಕ್ಷಿತ ಹಾಗೂ ಆರೋಗ್ಯಕರವಾಗಿ ರೂಪಿಸುವ ಉದ್ದೇಶ ಫೆಬ್ರುವರಿ 6ರ 'ಸುರಕ್ಷಿತ ಇಂಟರ್ನೆಟ್ ದಿನಾಚರಣೆ'ಯದು.**

■ **ಮಹತಿ**

ಪುರಾಣ ಕಥಾಕೋಶದ ಅದ್ಭುತ ಪಾತ್ರಗಳಲ್ಲೊಂದು ಭಸ್ಮಾಸುರನದು. ಆತ ಅಪಾರ ಶಕ್ತಿವಂತ. ತಾನು ಯಾರ ತಲೆಯ ಮೇಲೆ ಕೈ ಇಡುತ್ತೇನೆಯೋ ಅವರು ಸುಟ್ಟು ಭಸ್ಮವಾಗಲಿ ಎನ್ನುವುದು ಬ್ರಹ್ಮನಿಂದ ಭಸ್ಮಾಸುರ ಕೇಳಿದ ವರ. ಎದುರಾಳಿಗಳನ್ನು ಭಸ್ಮ ಮಾಡುವ ಶಕ್ತಿಯ ಕಾರಣಕ್ಕಾಗಿಯೇ ಅವನು ಭಸ್ಮಾಸುರ! ಇಂಥ ಅಪಾರ ಶಕ್ತಿವಂತ, ಮೋಹಿನಿಗೆ ಮರುಳಾಗಿ, ಅವಳಂತೆ ಕುಣಿಯಲು ಹೊರಟು, ತನ್ನ ಹಸ್ತವನ್ನು ತನ್ನ ತಲೆಯ ಮೇಲೆಯೇ ಇಟ್ಟುಕೊಂಡು ಭಸ್ಮವಾದ. ಸ್ವಯಂ ನಾಶಗೊಂಡ ಭಸ್ಮಾಸುರನ ಕಥೆಯನ್ನು ಆಧುನಿಕ ಸಂದರ್ಭದಲ್ಲಿ ಇಂಟರ್ನೆಟ್ ಮರುಳರ ಕುರಿತು ಹೇಳಬಹುದೆ?

ಇಂಟರ್ನೆಟ್ ಅಪಾರ ಸಾಧ್ಯತೆಗಳ ಅಕ್ಷಯಪಾತ್ರೆಯಂತಹುದು. ಜಗತ್ತೇ ಒಂದು ಹಳ್ಳಿ ಎನ್ನುವ ಪರಿಕಲ್ಪನೆ ನಿಜವಾದ ಅರ್ಥದಲ್ಲಿ ಸಾಕಾರಗೊಂಡಿರುವುದು ಇಂಟರ್ನೆಟ್ ಮೂಲಕವೇ. ಅಂತರ್ಜಾಲದ ಅಗಣಿತ ಶಕ್ತಿಯ ಹಿನ್ನೆಲೆಯಲ್ಲಿ ಅದು ನಮಗೆ ದೊರೆತಿರುವ ವರ ಎನ್ನುವುದಲ್ಲಿ ಯಾವ ಅನುಮಾನವೂ ಇಲ್ಲ. ಈ ವರ ವಿಕಾಸಕ್ಕಾಗಿ ಬಳಕೆಯಾದರೆ ತೊಂದರೆಯೇನಿಲ್ಲ. ಆದರೆ, ಸುತ್ತಮುತ್ತಲ ಜಗತ್ತನ್ನು ಮರೆತು, ಇಂಟರ್ನೆಟ್ ಜಗತ್ತಿನೊಳಗೇ ಕಳೆದುಹೋಗುವ ವ್ಯಸನಿಗಳೂ ಇದ್ದಾರೆ. ಇಂಟರ್ನೆಟ್ ವ್ಯಸನದಲ್ಲಿ ಮುಳುಗಿ ಸುತ್ತಮುತ್ತಲಿನವರನ್ನು ಅಲಕ್ಷ್ಯ ಮಾಡುವುದರೊಂದಿಗೆ, ತಮ್ಮನ್ನು ತಾವು ನಾಶ ಮಾಡಿಕೊಳ್ಳುವ ಮರುಳನ್ನು ಭಸ್ಮಾಸುರರೆಂದು ಹೇಳುವುದರಲ್ಲಿ ತಪ್ಪೇನೂ ಇಲ್ಲ.

ಮತ್ತೊಂದು ಬಗೆಯ ಭಸ್ಮಾಸುರರೂ ಇದ್ದಾರೆ. ಇಂಟರ್ನೆಟ್ ಅನ್ನು ವಂಚನೆಗೆ ಬಳಸುವ ಚಾಣಾಕ್ಷ ಕಿಡಿಗೇಡಿಗಳಿವರು. ಹಣಕಾಸಿನ ವಂಚನೆಗಳಿಗೆ, ಮಾಹಿತಿ ಲಪಟಾಯಿಸುವಿಕೆಗೆ, ಅನೈತಿಕ ಚಟುವಟಿಕೆಗಳಿಗೆ ಅಂತರ್ಜಾಲವನ್ನು ಕಬಂಧಬಾಹುಗಳಂತೆ ಬಳಸುವವರೂ ಇದ್ದಾರೆ. ಇವರೂ ಭಸ್ಮಾಸುರ ವರ್ಗದವರೇ.

### ವಿಕಾಸ-ವಿನಾಶದ ಎರಡು ಮುಖ

ಬೆರಳ ತುದಿಯಲ್ಲಿಯೇ ವಿಕಾಸ ಹಾಗೂ ವಿನಾಶ ಎರಡನ್ನೂ ಒಳಗೊಂಡಿರುವಂತಹದ್ದು ಇಂಟರ್ನೆಟ್. ಈ ಸವಲತ್ತು ಒಳ್ಳೆಯ ಉದ್ದೇಶಗಳಿಗೆ ಬಳಕೆಯಾಗಬೇಕು, ಅಪಬಳಕೆಗೆ ಒಳಗಾಗಬಾರದು ಎನ್ನುವ ಕಾಳಜಿಯಿಂದ ಪ್ರತಿ ವರ್ಷದ ಫೆಬ್ರುವರಿ ಎರಡನೇ ವಾರದಲ್ಲಿ 'ಸುರಕ್ಷಿತ ಅಂತರ್ಜಾಲ ದಿನ' (SID – Safer Internet Day) ಆಚರಿಸಲಾಗುತ್ತದೆ. ಆನ್‌ಲೈನ್ ಬಳಕೆಯನ್ನು ಸುರಕ್ಷಿತಗೊಳಿಸುವ ನಿಟ್ಟಿನಲ್ಲಿ ಜಾಗೃತಿ ಮೂಡಿಸುವುದು ಹಾಗೂ ಬಳಕೆದಾರರಲ್ಲಿ ಧನಾತ್ಮಕ ಮನೋಭಾವವನ್ನು ರೂಢಿಸುವುದು ಈ ದಿನಾಚರಣೆಯ ಉದ್ದೇಶ. ಪ್ರತಿ ಬಳಕೆದಾರರಿಗೂ ಸುರಕ್ಷಿತ ಆನ್‌ಲೈನ್ ಪರಿಸರವನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ವಿಚಾರಮಂಥನಕ್ಕೂ 'ಎಸ್‌ಐಡಿ' ಅವಕಾಶ ಕಲ್ಪಿಸುತ್ತದೆ.

ಹಳ್ಳಿ, ಪಟ್ಟಣ, ನಗರ, ಮಹಾನಗರ ಸೇರಿದಂತೆ ಎಲ್ಲ ಪ್ರದೇಶಗಳಲ್ಲಿನ ಜನರು ಡಿಜಿಟಲ್ ಏಕಚಕ್ರಾಧಿಪತ್ಯಕ್ಕೆ ಒಳಪಟ್ಟಿರುವ ದಿನಗಳಿವು. ಶಾಲೆಗೆ ಹೋಗಿ ಅಕ್ಷರ ಕಲಿಯದ ಕೋಟಿ ಕೋಟಿ ಜನರಿದ್ದಾರೆ. ಆದರೆ, ಮೊಬೈಲ್ ಫೋನ್ ಇಲ್ಲದ ನಾಗರಿಕರ ಸಂಖ್ಯೆ ಕಡಿಮೆ. ಭಾರತದ ಉದಾಹರಣೆ ನೋಡಿ: ದೇಶದಲ್ಲಿನ 140 ಕೋಟಿಗೂ ಹೆಚ್ಚಿನ ಜನಸಂಖ್ಯೆಯಲ್ಲಿ, ಸುಮಾರು 120 ಕೋಟಿ ಜನ ಮೊಬೈಲ್ ಫೋನ್ ಬಳಸುತ್ತಿದ್ದಾರೆ. ಆದರೆ, ದೇಶದಲ್ಲಿನ ಸಾಕ್ಷರರ ಸಂಖ್ಯೆ 100 ಕೋಟಿಗೂ ಕಡಿಮೆ. ವಿಶ್ವದಲ್ಲಿನ